(ಇಂದು ದಿನಾಂಕ:10-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರ ಪರವಾಗಿ:-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಡಿ.1 ರಿಂದ ನಿ.ಪಿ.13 | ಒಟ್ಟು 13 ಪಹಣಿ ಪತ್ರಿಕೆಗಳ ಧೃಢಿಕೃತ ನಕಲುಗಳು |
| ನಿ.ಪಿ.14 ರಿಂದ 16 | ಒಟ್ಟು 3 ಮ್ಯುಟೇಷನ್ ಗಳ ಧೃಡಿಕೃತ ನಕಲುಗಳು |
| ನಿ.ಪಿ.17 | ಒಂದು ಮದುವೆ ಆಮಂತ್ರಣ ಪತ್ರಿಕೆ |

**ಪಾಟೀಸವಾಲು: ವಾದಿಯರ ಪರ ಶ್ರೀ ಕೆ ಬಿ ಜಿ ವಕೀಲರಿಂದ:**

1. 2003 ರಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ. ನಾನೇ ಸ್ವಂತ ದುಡಿದು ನನ್ನ ತಂಗಿಯರ ಮದುವೆ ಮಾಡಿರುತ್ತೇನೆ. ದಾವಾ ಜಮೀನಿನಿಂದ ಆದಾಯ ಬರುತ್ತದೆ. ನಾನು ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತೇನೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ನನ್ನ ತಂಗಿಯರ ಮದುವೆ ವೇಳೆಯಲ್ಲಿ ಭಾಗ ಅಂತಾ ಹಣ ಕೊಟ್ಟಿಲ್ಲ, ಆದರೆ ಮದುವೆಯನ್ನು ವರದಕ್ಷಿಣೆ ಕೊಟ್ಟು ಮಾಡಿರುತ್ತೇನೆ. ವರದಕ್ಷಿಣೆ ಎಷ್ಟು ಕೊಟ್ಟಿದ್ದೇನೆ ಎಂದು ನಾನು ವಾದಪತ್ರದಲ್ಲಿ ಬರೆದಿಲ್ಲ. ಬಂಗಾರ ಖರೀದಿ ಮಾಡಿದ ಬಗ್ಗೆ ರಶೀದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಮ್ಮ ತಂದೆ ನನಗೆ 1989 ರಲ್ಲಿ ಭಾಗ ಮಾಡಿಕೊಟ್ಟಿದ್ದಾರೆ. ಆ ವೇಳೆಯಲ್ಲಿ ನನ್ನ ತಂಗಿಯರು ಅಂದರೆ ಪ್ರತಿವಾದಿ ನಂ.3 ಮತ್ತು 4 ರವರ ವಯಸ್ಸು 10 ವರ್ಷಕ್ಕಿಂತ ಕಡಿಮೆ ಇತ್ತು.

2. ನನ್ನ ತಾಯಿಯ ಅನುಮತಿ ಪಡೆದು ನಾನು ನನ್ನ ಪರ ಮ್ಯೂಟೇಶನ್ ಮಾಡಿಕೊಂಡಿದ್ದೇನೆ. ನನ್ನ ತಾಯಿಗೆ ಏನು ಆಸ್ತಿ ಕೊಟ್ಟಿಲ್ಲ. ವಿಭಾಗ ಪತ್ರ ಬರೆದಿಲ್ಲ. ನಿಪಿ-37 ಮ್ಯೂಟೇಶನ್‌ನಲ್ಲಿ ವಿಭಾಗ ಅಂತಾ ಬರೆಯಲಾಗಿಲ್ಲ, ಹಕ್ಕುಬದಲಾವಣೆ ಅಂತಾ ಬರೆಯಲಾಗಿದೆ ಎಂದರೆ ಸರಿ. ದಾವಾ ಜಮೀನು ನನ್ನ ತಾತನ ಆಸ್ತಿ ಎಂದರೆ ಸರಿ. ನಾನು ಪ್ರಕರಣಕ್ಕೆ ಅನುಕೂಲವಾಗುವಂತೆ ಮದುವೆ ಆಮಂತ್ರಣ ಪತ್ರಿಕೆ ಮುದ್ರಿಸಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ಮದುವೆ ಆಮಂತ್ರಣ ಪತ್ರಿಕೆಗಳಿಗೆ ಕುಂಕುಮ ಅರಿಶಿಣ ಹಚ್ಚಲಾಗುತ್ತದೆ ಎಂದರೆ, ಮದುವೆ ಪೂರ್ವದಲ್ಲಿ ಕೇವಲ 5 ಆಮಂತ್ರಣ ಪತ್ರಿಕೆಗಳಿಗೆ ಹಚ್ಚಲಾಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಮದುವೆ ಆಮಂತ್ರಣ ಪತ್ರಿಕೆಗಳ ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಮದುವೆ ಆಮಂತ್ರಣ ಪತ್ರಿಕೆಗಳನ್ನು ಮರುಮುದ್ರಣ ಮಾಡಬಹುದು. ಆದರೆ ಮರುಮದುವೆ ಮಾಡಲು ಬರುವುದಿಲ್ಲ. ಮದುವೆ ಆಮಂತ್ರಣ ಪತ್ರಿಕೆಗಳ ಮೇಲೆ ನನ್ನ ತಾಯಿ ಹೆಸರು ನಾವು ಹಾಕಿಸಿಲ್ಲ. ಏಕೆಂದರೆ ನಾನು ಬಸವ ತತ್ವ ಪಾಲನೆ ಮಾಡುವವನು. ಬಸವತತ್ವ ಪಾಲನೆ ಮಾಡುವವರು ಮದುಮಗಳು ಮತ್ತು ಮಧುಮಗನ ಮೇಲೆ ಅಕ್ಕಿಕಾಳು ಹಾಕುವುದಿಲ್ಲ, ಹೂ ಗಳನ್ನು ಹಾಕುತ್ತಾರೆ. ಮದುವೆ ಆಮಂತ್ರಣ ಪತ್ರಿಕೆಗಳ ಮೇಲೆ ಶರಣರ ಹೆಸರು ಇಲ್ಲ ಆದರೆ ಪೋಟೋ ಇದೆ.

3. ನನ್ನ ತಂಗಿಯರು ನನ್ನ ಭಾಗಸ್ಥರು. ನಾನು ಅವರಿಗೆ ಸೇರತಕ್ಕ ಭಾಗವನ್ನು ಅಂದರೆ ಪಾರ್ವತಿಯವರಿಗೆ ಒಂದು ಎಕರೆ ಮತ್ತು ಜ್ಯೋತಿ ಎನ್ನುವವರಿಗೆ ಒಂದು ಎಕರೆ ಜಮೀನು ಭಾಗದ ರೂಪದಲ್ಲಿ ಕೊಟ್ಟಿರುತ್ತೇನೆ. ಆ ವೇಳೆಯಲ್ಲಿ ಭಾಗ್ಯಲಕ್ಷ್ಮೀಗೆ ಭಾಗ ಕೊಟ್ಟಿಲ್ಲ. 10-12 ವರ್ಷಗಳ ಹಿಂದೆ ಜಮೀನು ಮಾರಾಟ ಮಾಡಿದ ನಂತರ ಬಂದ ಹಣದಲ್ಲಿ ಭಾಗ್ಯಲಕ್ಷ್ಮೀಗೆ ಹಣವನ್ನು ಕೊಟ್ಟಿರುತ್ತೇನೆ. ಬಂದ ಹಣದಲ್ಲಿ ಭಾಗ್ಯಲಕ್ಷ್ಮೀಗೆ ಹಣವನ್ನು ಕೊಟ್ಟ ಬಗ್ಗೆ ಯಾವುದೇ ದಾಖಲೆಯನ್ನು ನಾನು ಬರೆಯಿಸಿಕೊಂಡಿಲ್ಲ. ಭಾಗ್ಯಲಕ್ಷ್ಮೀಗೆ ರೂ.50 ಸಾವಿರ ಪಾರ್ವತಿ ಮತ್ತು ಜ್ಯೋತಿ ಇವರಿಗೆ ತಲಾ ರೂ.1 ಲಕ್ಷ ನಗದು ಹಣವನ್ನು ಬುದ್ದಿವಂತರ ಸಮಕ್ಷಮ ಕೊಟ್ಟ ಬಗ್ಗೆ ಯಾವುದೇ ದಾಖಲೆಯನ್ನು ನಾನು ಬರೆಯಿಸಿಕೊಂಡಿಲ್ಲ. ನಾನು ದುಡಿದ ಹಣದಲ್ಲಿಯೂ ಕೂಡಾ ಬಂಗಾರವನ್ನು ಕೊಡಿಸಿರುತ್ತೇನೆ.

4. ನಾನು 30 ವರ್ಷಗಳ ಹಿಂದೆ ಬಳ್ಳಾರಿ ನಗರಕ್ಕೆ ಹೋಗಿದ್ದೆ. ಅಲ್ಲಿ ಹೋದ 3 ವರ್ಷಗಳ ನಂತರ ನಾನು ಮದುವೆ ಮಾಡಿಕೊಂಡೆ. ಬಳ್ಳಾರಿಯಲ್ಲಿ ನಗರದಲ್ಲಿ 18 * 32 ವಿಸ್ತೀರ್ಣದ ಒಂದು ಮನೆ ಇರುತ್ತದೆ. ನನ್ನ ತಮ್ಮನ ಮತ್ತು ತಂಗಿಯರ ಮದುವೆ ಸಿಂಗಾಪೂರ ಗ್ರಾಮದಲ್ಲಿ ಆಯಿತು. 1989 ಸಾಲಿನಲ್ಲಿ ನಮ್ಮ ಅಣ್ಣತಮ್ಮಂದಿರ ಮತ್ತು ಅಕ್ಕತಂಗಿಯರ ಯಾರದ್ದು ಮದುವೆ ಆಗಿದಿಲ್ಲ. ಆ ವೇಳೆಯಲ್ಲಿ ಪ್ರತಿವಾದಿ ನಂ.3 ಮತ್ತು 4 ರವರು ಅಲ್ಪವಯಿ ಆಗಿದ್ದರು. ನನ್ನ ಪ್ರತಿವಾದಪತ್ರದಲ್ಲಿ ಬರೆದ ಹಾಗೆ ಪಾಲು ವಿಭಾಗ ಪತ್ರಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಇಲ್ಲ. ನನ್ನ ಪ್ರತಿವಾದಪತ್ರದಲ್ಲಿ ಹಣ ಕೊಟ್ಟ ಬಗ್ಗೆ, ಬಂಗಾರ ಕೊಟ್ಟ ಬಗ್ಗೆ ದಾಖಲೆಗಳು ಇಲ್ಲ. ನನ್ನ ತಂಗಿ ವಾಣಿಯವರ ಮದುವೆ ಮಾಡಿದ ನಂತರ ವಾದಿ ನನ್ನ ವಿರುದ್ಧ ಪ್ರಸ್ತುತ ದಾವೆ ಸಲ್ಲಿಸಿದ್ದಾಳೆ.

5. ವಾಣಿರವರ ಮದುವೆ ವೇಳೆಯಲ್ಲಿ ಖರ್ಚು ಮಾಡಿದ ಬಗ್ಗೆ ಯಾವುದೇ ರಶೀದಿಗಳು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಏಕೆಂದರೆ ಅವರು ಯಾರು ಹಣ ಖರ್ಚು ಮಾಡಿದ ಬಗ್ಗೆ ರಶೀದಿ ಕೊಟ್ಟಿಲ್ಲ. ನಾನು ಹಣ ಖರ್ಚು ಮಾಡಿ ವಾಣಿ ರವರ ಮದುವೆ ಮಾಡಿದ್ದೆ ಆದಲ್ಲಿ ನಾನು ರಶೀದಿಗಳನ್ನು ಸುರಕ್ಷಿತವಾಗಿ ಇಡುತ್ತಿದ್ದೆ, ನಾನು ಮದುವೆ ಖರ್ಚು ಮಾಡಿಲ್ಲ ಕಾರಣ ನನ್ನ ಬಳಿ ರಶೀದಿಗಳು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜೀವಿತಾವಧಿಯಲ್ಲಿ ಭಾಗ್ಯಲಕ್ಷ್ಮೀರವರ ಮದುವೆಯನ್ನು ನಾನೇ ಖರ್ಚು ಮಾಡಿ ಮದುವೆ ಮಾಡಿದ್ದೇನೆ. ನನ್ನ ತಂದೆಗೆ ಒಟ್ಟು 72 ಎಕರೆ ಜಮೀನು ಇತ್ತು. ಮನೆ ಖರ್ಚಿಗೆ ನನ್ನ ತಂದೆಯವರು ಮಾರಾಟ ಮಾಡಿದ್ದರು. ನನ್ನ ತಂದೆ ಪರಿಸ್ಥಿತಿಗೆ ತಕ್ಕಂತೆ ಸ್ವಲ್ಪ ಸ್ವಲ್ಪ ಆಸ್ತಿ ಮಾರಾಟ ಮಾಡಿಕೊಂಡು ಬಂದ. ನನ್ನ ತಂದೆ ಕಡೆಯದಾಗಿ 20 ವರ್ಷಗಳ ಹಿಂದೆ ಮಾರಾಟ ಮಾಡಿದ್ದರು, ಅದಕ್ಕೆ ನನ್ನ ಒಪ್ಪಿಗೆ ಇತ್ತು. ಆಗ ಭಾಗ ಆಗಿರಲಿಲ್ಲ.

6. ಆಸ್ತಿ ನನ್ನ ತಂಗಿಯರಿಗೆ ಕೊಡಬೇಕಾಗುತ್ತದೆ ಅಂತಾ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ಮತ್ತು ಪ್ರತಿವಾದ

ಪತ್ರದಲ್ಲಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಈಗಿನ ಸದ್ಯದ ಕಾನೂನು ಪ್ರಕಾರ ನಾನು ದಾವೆಯಲ್ಲಿರುವ ಎಲ್ಲ ಪಕ್ಷಗಾರರು ಭಾಗ ಕೊಡಬೇಕಾಗುತ್ತದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು